


# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೨೦



ಶ್ರೀರಾಮಕೃಷ್ಣರ ವಯೋವೃದ್ಧ ಸಂನ್ಯಾಸಿ ಶಿಷ್ಯರಾದ ಸ್ವಾಮಿ ಅದ್ವೈತಾನಂದರು ಬೇಲೂರು ಮಠದಲ್ಲಿ ಡಿಸೆಂಬರ್ ೨೮ರಂದು (೧೯೦೭) ತಮ್ಮ ೮೧ನೇ ವಯಸ್ಸಿನಲ್ಲಿ ಶರೀರ ತ್ಯಾಗ ಮಾಡಿದ ರೆಂಬ ದುಃಖ ವಾರ್ತೆಯು ಬಂದಿತು. ಇವರು ತಮ್ಮ ಕೊನೆಯ ಕೆಲವು ವರ್ಷಗಳನ್ನು ಮಠದಲ್ಲಿಯೇ ಕಳೆದಿದ್ದರು. ವರಾಹ ನಗರದ ಮಠದಲ್ಲಿ ಇವರ ಸ್ನೇಹಾದರಗಳನ್ನು ವಿರಜಾನಂದರು ಬಹಳ ಪಡೆದಿದ್ದರು. ಬೃಂದಾವನಕ್ಕೆ ತಪಸ್ಸಿಗೆಂದು ಹೊರಟು, ದಾರಿಯಲ್ಲಿ ಕಾಶಿಗೆ ಹೋಗಿದ್ದಾಗ ಇವರೊಂದಿಗೆ ಒಂದು ತಿಂಗಳು ಇರುವ ಸುಯೋಗ ಒದಗಿತ್ತು. ಈ ಒಂದು ತಿಂಗಳ ಮಧುರ ನೆನಪುಗಳು ವಿರಜಾನಂದರಿಗೆ ಅಮೂಲ್ಯವಾದದ್ದು. ಅಲ್ಲಿದ್ದಾಗ ಅವರು ಇಬ್ಬರಿಗಾಗಿಯೂ ಮಧುಕರಿ ಮಾಡುತ್ತಿದ್ದರು. ಭಿಕ್ಷೆಯಲ್ಲಿ ಕೆಲವೊಮ್ಮೆ ಅನ್ನ ಪಲ್ಯಗಳು ಸರಿಯಾಗಿ ಸಿಗದಿದ್ದಾಗ ವಿರಜಾನಂದರು ಪೇಟೆಯಿಂದ ತರಕಾರಿ ಅಕ್ಕಿಯನ್ನು ಅವರಿಗಾಗಿ ಕೊಂಡು ತರುತ್ತಿದ್ದುದನ್ನು ಕಂಡು ವೃದ್ಧರಾದ ಅದ್ವೈತಾನಂದರಿಗೆ ತುಂಬ ಖುಷಿಯಾಗುತ್ತಿತ್ತು. ಅಡುಗೆ ಮಾಡಿ ಇಬ್ಬರೂ ಒಂದೆಡೆ ಕುಳಿತು ಆನಂದದಿಂದ ಊಟಮಾಡುತ್ತಿದ್ದರು. ಸಂಜೆ ಅವರು ಇವರನ್ನು ಕರೆದೊಯ್ದು ಕಾಶಿಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ಒಂದೊಂದಾಗಿ ತೋರಿಸಿಕೊಂಡು ಬರುತ್ತಿದ್ದರು.

೧೯೦೯ರ ಪ್ರಾರಂಭದಲ್ಲಿ ಶ್ರೀಮತಿ ಸೇವಿಯರ್ ಕೆಲದಿನಗಳ ಮಟ್ಟಿಗೆಂದು ಇಂಗ್ಲೆಂಡಿಗೆ ಹೋದರು, ಆಗಾಗ ಅವರ ಕ್ಷೇಮ ಸಮಾಚಾರ ತಿಳಿದು ಬರುತ್ತಿತ್ತು. ೧೯೧೦ರಲ್ಲಿ ಅದ್ವೈತ ಆಶ್ರಮದ ಮುದ್ರಣಾಲಯಕ್ಕೆ ಸಂಬಂಧಿಸಿದ ಕೆಲವೊಂದು ಕೆಲಸಗಳಿಗಾಗಿ ವಿರಜಾನಂದರು ಕೊಲ್ಕತ್ತೆಗೆ ಹೋಗಬೇಕಾಯಿತು. ಕೊಲ್ಕತ್ತೆಗೆ ಹೋಗುವ ದಾರಿಯಲ್ಲಿ ಬೃಂದಾವನಕ್ಕೂ, ಕಾಶಿಗೂ ಹೋಗಿ ಸ್ವಲ್ಪ ದಿನಗಳಿದ್ದರು. ಕಾಶಿಯಲ್ಲಿ ಬೂಡೋ ಬಾಬಾ (ಸ್ವಾಮಿ ಸಚ್ಚಿದಾನಂದ)ರನ್ನು ಕಂಡರು. ಜನವರಿ ೧೩ರಂದು ಬೇಲೂರು ಮಠವನ್ನು ತಲುಪಿದರು. ೨೩ರಂದು, ಭಾನುವಾರ ಸ್ವಾಮಿ ಅದ್ವೈತಾನಂದರ ನೆನಪಿನಲ್ಲಿ ಸಮಾರಂಭವೊಂದನ್ನು ಇಟ್ಟುಕೊಂಡಿದ್ದರು. ಫೆಬ್ರವರಿ ೧ರಂದು ಆಚರಿಸಿದ ಸ್ವಾಮೀಜಿಯವರ ಜನ್ಮೋತ್ಸವವನ್ನು ಆರು ವರ್ಷಗಳ ನಂತರ ಕಂಡ ವಿರಜಾನಂದರಿಗೆ ತುಂಬ ಸಂತೋಷವಾಯಿತು. ೬ನೇ ಫೆಬ್ರವರಿ ಭಾನುವಾರ 'ಸಾರ್ವಜನಿಕ ಉತ್ಸವ'[೧] ಕೊನೆಯ ದಿನ ಮೂರು ಸಾವಿರ ದರಿದ್ರ ನಾರಾಯಣರನ್ನು ಕುಳ್ಳಿರಿಸಿ, ತೃಪ್ತಿಯಾಗುವವರೆಗೂ ಭೋಜನ ಮಾಡಿಸಲಾಗಿತ್ತು. ಅಲ್ಲದೆ ಮೂರುಸಾವಿರ ಭಕ್ತರೂ ಸಹ ಕುಳಿತು ಪ್ರಸಾದವನ್ನು ಪಡೆದರು. ಅಂದು ಸ್ವಾಮೀಜಿಯವರ ಗ್ರಂಥದಿಂದ ಆಯ್ದ

೧ ಸಾರ್ವಜನಿಕ ಉತ್ಸವವನ್ನು ('ಸಾಧಾರಣ ಉತ್ಸವ') ಈಚೆಗೆ ರಾಮಕೃಷ್ಣರ ಜನ್ಮತಿಥಿಯ ನಂತರದ ಭಾನುವಾರದಂದು ಆಚರಿಸುತ್ತಾರೆ. ಅಂದಿನ ದಿನವಿಡೀ ಶ್ರೀರಾಮಕೃಷ್ಣರ ದರ್ಶನವಿರುತ್ತದೆ. ಬೇಲೂರು ಮಠದಲ್ಲಿ ಅಲ್ಲಿಯ ಒಳಗೂ ಹೊರಗೂ ರಸ್ತೆಯ ಇಬ್ಬದಿಯಲ್ಲಿಯೂ ಬಡಜನರು ತಮ್ಮ ಅಂಗಡಿ ಹರವಿ ಕುಳಿತುಕೊಳ್ಳುತ್ತಾರೆ. ಅದು ದೊಡ್ಡ ಸಂತೆ. ಸಂಜೆ ವಿವಿಧ ರೀತಿಯ ಆಕಾಶಬಾಣಗಳನ್ನು ಚಿಮ್ಮಿಸಿ, ವಿವಿಧ ಆಕಾರ ತಾಳುವಂತೆ ಮಾಡುತ್ತಾರೆ. ಇದನ್ನು ನೋಡಲು ಜನರು ಕಿಕ್ಕಿರಿದಿರುತ್ತಾರೆ. ಕೆಲವರು ಗಂಗೆಯಲ್ಲಿ ನೌಕೆ ಮಾಡಿಕೊಂಡು ಈ ಅದ್ಭುತವನ್ನು ವೀಕ್ಷಿಸುತ್ತಾರೆ.

ಕೆಲವು ಭಾಗಗಳನ್ನು ಓದಿ ಹೇಳಲಾಗಿತ್ತು ಮತ್ತು ಸ್ವಾಮೀಜಿಯವರ ಭಕ್ತರಾದ ಕೆಲವು ಗಣ್ಯವ್ಯಕ್ತಿಗಳಿಂದ ಭಾಷಣಗಳೂ ಇದ್ದವು.

ಮಾಯಾವತಿಯ ಕೆಲಸಗಳಿಗಾಗಿ ವಿರಜಾನಂದರು ಆಗಾಗ ಕೊಲ್ಕತ್ತೆಗೆ ಹೋಗಬೇಕಾಗುತ್ತಿತ್ತು. ಸೋದರಿ ನಿವೇದಿತೆಯನ್ನು ಕಾಣಲು ಕೆಲವು ಬಾರಿ ಅವರ ಮನೆಗೂ ಹೋಗಿದ್ದರು. ೧೯೧೦ರ ಮಾರ್ಚ್ ೧೭ರಂದು ವಿರಜಾನಂದರು ಬಾಬೂರಾಮ್ ಮಹಾರಾಜ್ ಮತ್ತಿತರರೊಂದಿಗೆ ದಕ್ಷಿಣೇಶ್ವರಕ್ಕೆ ಹೋಗಿ ಅಲ್ಲಿಯೇ ಪ್ರಸಾದ ಸ್ವೀಕರಿಸಿ ಬಂದಿದ್ದರು. ರಾಮಕೃಷ್ಣರ ಅಣ್ಣನ ಮಗನಾದ ರಾಮಲಾಲ್ ದಾದಾ, ಬಂದವರಿಗೆಲ್ಲ ತುಂಬ ಆದರೋಪಚಾರ ಮಾಡಿದ್ದರು.

ಮರುದಿನ ಮಾರ್ಚ್ ೩ರಂದು ಮಠದಲ್ಲಿ ಉತ್ಸವದ ವಾತಾವರಣವಿತ್ತು. ಏಕೆಂದರೆ ಅಧ್ಯಕ್ಷರಾದ ರಾಜಾ ಮಹಾರಾಜರು ದಕ್ಷಿಣ ಭಾರತದ ಯಾತ್ರೆಯನ್ನು ಮುಗಿಸಿ, ಸುಮಾರು ಒಂದೂವರೆ ವರ್ಷಗಳ ನಂತರ ಮಠಕ್ಕೆ ಹಿಂತಿರುಗಿದ್ದರು. ಅವರನ್ನು ಕಂಡ ಎಲ್ಲರ ಆನಂದಕ್ಕೆ ಪಾರವಿರಲಿಲ್ಲ. ಬಹುಕಾಲದ ನಂತರ ಮಹಾರಾಜರ ದರ್ಶನ ಮತ್ತು ಸತ್ಸಂಗವನ್ನು ಪಡೆದ ವಿರಜಾನಂದರು ಸಂತೃಪ್ತರಾದರು. ಮಹಾರಾಜರು ದಕ್ಷಿಣ ಪ್ರಾಂತ್ಯಗಳಿಗೆ ಭೇಟಿ ಇತ್ತಿದ್ದರಿಂದ ಅಲ್ಲೆಲ್ಲ ಶ್ರೀರಾಮಕೃಷ್ಣ ವಿವೇಕಾನಂದರ ಭಾವಧಾರೆಯು ಪುಷ್ಟಿಗೊಂಡಿತ್ತು. ೧೯೦೯ರ ಜನವರಿ ೩೦ರಂದು ಬೆಂಗಳೂರಿನಲ್ಲಿ ಹೊಸ ಮಠದ ಉದ್ಘಾಟನೆಯನ್ನೂ ಸಹ ಮಹಾರಾಜರು ಮಾಡಿದ್ದರು. ಅಲ್ಲಿಗೆ ಇವರನ್ನು ಸ್ವಾಮಿ ರಾಮಕೃಷ್ಣಾನಂದರು ಕರೆದೊಯ್ದಿದ್ದರು. ಅಂದಿನ ಸಮಾರಂಭದಲ್ಲಿ ಅಮೆರಿಕೆಯ ಸಿಸ್ಟರ್ ದೇವಮಾತಾ ಮತ್ತು ಬೆಂಗಳೂರಿನ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದರು. ಬೆಂಗಳೂರಿನ ಜನತೆಯ ಪರವಾಗಿ ಮೈಸೂರಿನ ದಿವಾನರು ಅಭಿನಂದನ ಪತ್ರವೊಂದನ್ನು ಓದಿದರು. ನಂತರ ಉಳಿದ ಅಭಿನಂದನಾ ಪತ್ರಗಳು ಓದಲ್ಪಟ್ಟವು. ಒಂದರಲ್ಲಿ ಹೀಗೆ ಹೇಳಲಾಗಿತ್ತು —

''ಭಗವಾನ್ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಹೆಸರುಗಳು ಈ ಪ್ರಾಂತ್ಯಗಳಲ್ಲಿ ಮನೆಮಾತಾಗಿವೆ. ಅವರ ಕೃತಿಗಳು ಪ್ರಪಂಚದಲ್ಲೇ ಪ್ರಖ್ಯಾತವಾಗಿವೆ.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ**
**ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥**

— ಈ ಭಗವದ್ವಾಣಿ ನಮಗೆಲ್ಲರಿಗೂ ಸುಪರಿಚಿತ. ಶ್ರೀರಾಮಕೃಷ್ಣರಲ್ಲಿ ಭಗವಂತನ ಈ ವಾಗ್ದಾನವು ಸಫಲಗೊಂಡಿದೆ ಎಂಬುದು ನಮ್ಮೆಲ್ಲರ ನಂಬುಗೆ. ನಿಮ್ಮ ಪದತಲದಲ್ಲಿ ಕಟ್ಟಡವೊಂದನ್ನು ನಿವೇದಿಸಲು ನಾವೆಲ್ಲ ಹರ್ಷಿಸುತ್ತೇವೆ. ಆಧ್ಯಾತ್ಮಿಕತೆಯನ್ನು ಎಲ್ಲೆಡೆ ಪಸರಿಸಲು ಬೇಕಾದ ಶಕ್ತಿಯನ್ನು ವಿಶ್ವೇಶ್ವರನು ನಿಮಗೆ ನೀಡಲಿ, ಬೆಂಗಳೂರು ಆಶ್ರಮವು ಉನ್ನತವಾದ ಭಾವನೆಗಳನ್ನು ಬಿತ್ತರಿಸುವ ಕೇಂದ್ರವಾಗಲಿ ಎಂಬುದೇ ನಮ್ಮ ಪ್ರಾರ್ಥನೆ.''

ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಮತ್ತೊಂದು ಬಿನ್ನವತ್ತಳೆಯನ್ನು ಓದಿದರು. ಅದರ ಒಂದಂಶ:

''ಸ್ವಾಮಿಗಳೇ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ ಕೆಲಸದ ಮಹತ್ತರವಾದ ಜವಾಬ್ದಾರಿಯು ಈಗ ನಿಮ್ಮ ಹೆಗಲ ಮೇಲಿದೆ. ನಿಮ್ಮಲ್ಲಿ ಸ್ವಾಮಿ ರಾಮಕೃಷ್ಣಾನಂದ, ಅಭೇದಾನಂದರಂತಹ ವೀರ ಸೇನಾನಿಗಳೂ ಮತ್ತು ಹಲವು ಮಹಾತ್ಮರೂ ಇರುವರು. ನೀವು ಅದೇ ರೀತಿಯ ಅದ್ಭುತ ಶಕ್ತಿಯುಳ್ಳ ಆಧ್ಯಾತ್ಮಿಕ ವ್ಯಕ್ತಿಗಳನ್ನು ಸೃಷ್ಟಿ ಮಾಡುವಂತಾಗಲಿ ಮತ್ತು ಅವರ ಮೂಲಕ ಭಾರತದ ತತ್ತ್ವಗಳ ಅನರ್ಘ್ಯ ರತ್ನವು ಮಸುಕಾಗದೆ, ಜಾಜ್ವಲ್ಯಮಾನವಾಗಿ ಮುಂದಿನ ಪೀಳಿಗೆಯವರಿಗೆ, ವಿಶಾಲ ವಿಶ್ವಕ್ಕೇ ತಲಪುವಂತಾಗಲಿ ಎಂಬುದೇ ಭಗವಂತನಲ್ಲಿ ನಮ್ಮೆಲ್ಲರ ಹೃತ್ಪೂರ್ವಕ ಪ್ರಾರ್ಥನೆ.''

ಸ್ವಾಮಿ ಬ್ರಹ್ಮಾನಂದರು ಬಿನ್ನವತ್ತಳೆಗಳಿಗೆ ಇಂಗ್ಲಿಷಿನಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿದರು. ಅದರ ಒಂದಂಶ:

''ಭಗವಂತನು ಎಲ್ಲೆಲ್ಲೂ ವಿರಾಜಮಾನನಾಗಿದ್ದಾನೆ. ಅವನಷ್ಟು ಸತ್ಯವು ಇನ್ನಾವುದೂ ಇಲ್ಲ. ಅವನು ಮಾತ್ರವೇ ಸತ್ಯ. ಮಿಕ್ಕದ್ದೆಲ್ಲ ಮಿಥ್ಯೆ. ಈ ಮಹಾ ಸತ್ಯವನ್ನು ಮಾನವ ಮರೆತುಬಿಡುತ್ತಾನೆ. ಅಂಥವರಿಗೆ ಅವರು ಆತ್ಮಸ್ವರೂಪರು, ಎಲ್ಲವೂ ಆತ್ಮಮಯ, ಜಗನ್ಮಿಥ್ಯಾ ಎಂದು ಸಾರಿ ಸಾರಿ ಹೇಳಬೇಕಾಗುತ್ತದೆ.

''ನಮ್ಮ ಆಚಾರ್ಯರಾದ ಶ್ರೀರಾಮಕೃಷ್ಣ ಪರಮಹಂಸರು ಇದನ್ನು ಜಗತ್ತಿಗೆ ಸಾರಲೆಂದೇ ಭೂಮಿಗೆ ಅವತರಿಸಿದ್ದರು. ಅವರು ತಮ್ಮ ಈ ಮಹಾನ್ ಕಾರ್ಯಕ್ಕೆ ನಾಂದಿಯಿತ್ತು ಹೋಗಿದ್ದಾರೆ. ಅತ್ಯುನ್ನತ ಸತ್ಯದರ್ಶನಕ್ಕಾಗಿಯೂ ಜೀವನದ ಸಮಸ್ಯೆಗಳ ಪರಿಹಾರಕ್ಕಾಗಿಯೂ ಜಗತ್ತೀಗ ವ್ಯಾಕುಲಗೊಂಡಿದೆ. ಕ್ರಮೇಣ ಇಡೀ ಜಗತ್ತು ಆಧ್ಯಾತ್ಮಿಕತೆಯಿಂದ ರಂಜಿಸುತ್ತದೆ. ಅವರ ಅವತರಣದಿಂದ ಪ್ರಪಂಚದ ಗಾಳಿಯೂ ಸಹ ಶುದ್ಧಗೊಂಡಿದೆ. ಅವರ ಕೃಪೆಯಿಂದ ಸಕಲ ದೇಶಗಳೂ ಧನ್ಯತೆಯನ್ನು ಪಡೆಯುತ್ತವೆ.

''ಶ್ರೀರಾಮಕೃಷ್ಣರ ಅವತರಣವನ್ನು ಗುರುತಿಸಿ ಶ್ಲಾಘಿಸಿದ ಪ್ರಮುಖ ಸ್ಥಳಗಳಲ್ಲಿ ಬೆಂಗಳೂರು ಒಂದು ಎಂಬುದನ್ನು ಕಂಡು ತುಂಬ ಸಂತೋಷವಾಯಿತು. ಅವರ ಸಂದೇಶವನ್ನು ನೀವು ಸ್ವೀಕರಿಸಿದ್ದು ನಿಮ್ಮ ಮಹಾಭಾಗ್ಯವೇ ಸರಿ. ನೀವು ಸ್ವೀಕರಿಸಿ ಮೆಚ್ಚಿದ್ದರಲ್ಲಿ ಆಶ್ಚರ್ಯವಾದರೂ ಏನು? ಏಕೆಂದರೆ ನಿಮ್ಮದು ಮಹಾನ್ ಆಚಾರ್ಯರ ನಾಡು! ಈಗಲೂ ನೀವು ವೇದಾಧ್ಯಯನವನ್ನು ಪ್ರಾಚೀನದಂತೆಯೇ ಪರಿಶುದ್ಧವಾಗಿ, ಅನೂಚಾನವಾಗಿ ಕಾಪಾಡಿಕೊಂಡು ಬಂದಿರುವಿರಿ. ಇಂದಿನ ಹಿಂದೂ ರಾಜ-ಮಹಾರಾಜರುಗಳಲ್ಲಿ ನಿಮ್ಮ ಮೈಸೂರಿನ ಮಹಾರಾಜರು ಒಬ್ಬ ಸರ್ವಶ್ರೇಷ್ಠ ಧಾರ್ಮಿಕ ವ್ಯಕ್ತಿ. ಈ ಕೇಂದ್ರದಿಂದ ಮಹತ್ ಕಾರ್ಯಗಳಾಗುವುವೆಂದು ಆಶಿಸುವೆ. ಶ್ರೀರಾಮಕೃಷ್ಣರ ಆಶೀರ್ವಾದದಿಂದ, ವಿಶ್ವದಲ್ಲೆಲ್ಲ ಹರಿಯುತ್ತಿರುವ ಆಧ್ಯಾತ್ಮಿಕ ಪ್ರವಾಹ

ದಲ್ಲಿ ನೀವೆಲ್ಲರೂ ಸಂಪೂರ್ಣವಾಗಿ ಭಾಗಿಗಳಾಗುವಂತಾಗಲಿ ಎಂಬುದೇ ನನ್ನ ಪ್ರಾರ್ಥನೆ.''

ರಾಜಾ ಮಹಾರಾಜರ ಭಾಷಣದ ನಂತರ ಅವರ ಆದೇಶದ ಮೇರೆಗೆ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಭಾಷಣದ ಮೂಲಕ ರಾಮಕೃಷ್ಣ ಮಿಷನ್ನಿನ ಉದ್ದೇಶಗಳನ್ನು ವಿವರಿಸಿದರು. ತದನಂತರ ಸಿಸ್ಟರ್ ದೇವಮಾತಾ ಸಹ ತಮ್ಮ ಭಾಷಣವನ್ನು ನೀಡಿದರು.

ಈ ಸಮಯದಲ್ಲೇ ಮಿಸೆಸ್ ಸೇವಿಯರ್‌ರವರ ಕುಶಲ ಸಮಾಚಾರ ಹೊತ್ತ ಲಂಡನ್ನಿನ ಪತ್ರ ವಿರಜಾನಂದರ ಕೈ ಸೇರಿತು. ಈ ಸಲದ ರಾಮಕೃಷ್ಣ ಜನ್ಮೋತ್ಸವವನ್ನು ವೀಕ್ಷಿಸುವ ಸೌಭಾಗ್ಯ ವಿರಜಾನಂದರದಾಗಿತ್ತು. ಬ್ರಹ್ಮಾನಂದರು ದಕ್ಷಿಣ ಭಾರತಕ್ಕೆ ಭೇಟಿ ಇತ್ತಾಗ, ಅಲ್ಲಿಂದ ರಾಮನಾಮ ಸಂಕೀರ್ತನೆಯನ್ನು ಬರೆಸಿ ತಂದಿದ್ದರು. ಅದರಲ್ಲಿ ಶ್ರೀರಾಮಚಂದ್ರನ ಸಮಗ್ರ, ಪವಿತ್ರ ಚರಿತ್ರೆಯು ಸಂಕ್ಷೇಪವಾಗಿ, ಸರಳ ಸಂಸ್ಕೃತ ಭಾಷೆಯಲ್ಲಿ ವರ್ಣಿತವಾಗಿತ್ತು. ಅದಕ್ಕೆ ರಾಗವನ್ನು ಹಾಕಿ ಮಠದ ಸಂನ್ಯಾಸಿ-ಬ್ರಹ್ಮಚಾರಿಗಳಿಗೆ ಕಲಿಸಲಾಗಿತ್ತು. ರಾಮಕೃಷ್ಣರ ಉತ್ಸವದ ದಿನ ಅದನ್ನು ಎಲ್ಲರೂ ಒಂದೇ ಸ್ವರದಲ್ಲಿ ಹಾಡಿದ್ದರು. ಸ್ವಯಂ ಬ್ರಹ್ಮಾನಂದರೂ ಸಹ ಇದರಲ್ಲಿ ಪಾಲ್ಗೊಂಡಿದ್ದರು. ಈ ಹೊಸ ಸಂಕೀರ್ತನೆಯು ಎಲ್ಲರ ಮನವನ್ನು ಸೂರೆಗೊಂಡಿತ್ತು.

ಬೇಸಿಗೆ ಕಾಲಿಡುತ್ತಲಿತ್ತು. ವಿರಜಾನಂದರು ಶ್ರೀಮಾತೆಯವರ ದರ್ಶನ ಪಡೆಯಲು ಜಯರಾಂಬಾಟಿಗೆ ಹೊರಟರು. ಇವರೊಂದಿಗೆ ನಿರ್ಮಲ್ (ಮುಂದೆ ಸ್ವಾಮಿ ಮಾಧವಾನಂದ) ಸಹ ಇದ್ದರು; ಅವರು ಮಾಯಾವತಿಯಲ್ಲಿ ಸೇವೆ ಸಲ್ಲಿಸಲು ವಿರಜಾನಂದರೊಂದಿಗೆ ಹೊರಡಬೇಕಿತ್ತು. ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಹಳೆಯ ವಾಸಗೃಹದ ಮುಂದೆ ಕಾಳೀಮಾವನ ಹುಲ್ಲಿನ ಮಹಡಿ ಮನೆ ನಿರ್ಮಿತವಾಗಿತ್ತು. ವಿರಜಾನಂದರು ಮತ್ತು ನಿರ್ಮಲ್ ಬೇಸಿಗೆಯಾದ್ದರಿಂದ ಆ ಮನೆಯ ಜಗುಲಿಯಲ್ಲಿ ಸೊಳ್ಳೆ ಪರದೆ ಕಟ್ಟಿ ಮಲಗುತ್ತಿದ್ದರು. ಇವರಿಬ್ಬರೂ ಜಯರಾಂಬಾಟಿಯಲ್ಲಿರುವಾಗಲೇ ಶಿಲ್ಲಾಂಗ್ ಮತ್ತು ಕೊಲ್ಕತ್ತೆಯಿಂದ ನಾಲ್ವರು ಯುವಕರು ಶ್ರೀಮಾತೆಯವರ ದರ್ಶನ ಪಡೆದು, ಅವರಿಂದ ದೀಕ್ಷೆಯನ್ನು ಪಡೆಯಬೇಕೆಂಬ ಬಯಕೆಯಿಂದ ಬಂದಿದ್ದರು. ಇವರಲ್ಲೊಬ್ಬರು ಮುಂದೆ ಮಠದ ಸುವಿಖ್ಯಾತ ಪಂಡಿತ ಸಂನ್ಯಾಸಿಗಳಾದ ಸ್ವಾಮಿ ಜಗದಾನಂದರು.[೨] ಇವರು ತಮ್ಮ ೭೦ನೇ ವಯಸ್ಸಿನಲ್ಲಿ ೧೯೫೧ರಲ್ಲಿ ಬೃಂದಾವನದಲ್ಲಿ ತಮ್ಮ ದೇಹತ್ಯಾಗ ಮಾಡಿದರು.

ಮಾಯಾವತಿಗೆ ಹಿಂತಿರುಗಿದ್ದ ವಿರಜಾನಂದರಿಗೆ ೧೯೧೧ರ ಮಧ್ಯಭಾಗದಲ್ಲೊಂದು ಆತಂಕದ ವರದಿ ಬಂದಿತು. ಪೂಜನೀಯ ಶಶಿ ಮಹಾರಾಜರು ಅಸ್ವಸ್ಥರಾಗಿದ್ದು, ಕೊಲ್ಕತ್ತೆಯ ಉದ್ಬೋಧನ ಕಾರ್ಯಾಲಯದಲ್ಲಿದ್ದಾರೆ, ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೂ ಆರೋಗ್ಯದಲ್ಲಿ ಸುಧಾರಣೆಯೇನೂ ಕಂಡು ಬರುತ್ತಿಲ್ಲ. ಅವರಿಗಂಟಿದ್ದ ವ್ಯಾಧಿಯಾದರೋ ರಾಜಯಕ್ಷ್ಮ (ಶ್ವಾಸಕೋಶದ ಕ್ಷಯ). ವಿರಜಾನಂದರು ಉದ್ವಿಗ್ನತೆಯಿಂದ ಕಾಲಕಳೆಯತೊಡಗಿದರು. ಕಾರ್ಯನಿಮಿತ್ತ ಈಗಷ್ಟೆ ಕೆಲವು ತಿಂಗಳುಗಳನ್ನು ಮಠದಲ್ಲಿ ಕಳೆದು ಬಂದಿದ್ದರು, ಮತ್ತೆ ಹೋಗುವುದು ಸಾಧ್ಯವಿರಲಿಲ್ಲ. ಶಶಿ ಮಹಾರಾಜರ ನೆನಪು ಮತ್ತೆ ಮತ್ತೆ ಬರಲಾರಂಭಿಸಿತು. ಅವರು ಮದ್ರಾಸಿಗೆ ಹೋದಾಗಿನಿಂದ ಅವರನ್ನು ವಿರಜಾನಂದರು ನೋಡಿರಲಿಲ್ಲ. ಅವರು ಮಠಕ್ಕೆ ಸೇರಲು ಸಹಾಯ ಮಾಡಿದವರಲ್ಲಿ ಶಶಿ ಮಹಾರಾಜರೂ ಒಬ್ಬರಲ್ಲವೆ? ಅವರೇ ತಾನೇ ಗಣಿತ ಹೇಳಿಕೊಡುತ್ತೇನೆಂದು ಕಾಳೀಕೃಷ್ಣರನ್ನು ಮಠಕ್ಕೆ ಕರೆದದ್ದು? ಆದರೆ ಎಷ್ಟು ಚೆನ್ನಾಗಿ ಗಣಿತ ಹೇಳಿಕೊಟ್ಟರೆಂದರೆ ಜಗತ್ತಿನ ಲೆಕ್ಕಾಚಾರಗಳೆಲ್ಲ ಚಿರಕಾಲಕ್ಕೂ ಅಳಿಸಿಯೇ ಹೋಯಿತು! ೧೯೧೧ರ ಆಗಸ್ಟ್ ೨೧ರಂದು ರಾಮಕೃಷ್ಣಗತಪ್ರಾಣರಾದ ಸ್ವಾಮಿ ರಾಮಕೃಷ್ಣಾನಂದರು ಮಹಾಸಮಾಧಿಯನ್ನು ಹೊಂದಿದರೆಂಬ ದುಃಖಕರವಾದ ವಾರ್ತೆಯು ಮಾಯಾವತಿಯನ್ನು ತಲುಪಿತು. ರಾಮಕೃಷ್ಣಾನಂದರು ಕೊಲ್ಕತ್ತೆಗೆ ಬಂದು ಎರಡು ತಿಂಗಳಾಗಿತ್ತಷ್ಟೆ. ಅವರ ವಯಸ್ಸು ೫೦ ವರ್ಷವೂ ಆಗಿರಲಿಲ್ಲ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಲ್ಲಿ ಮೊದಲು ದೇಹತ್ಯಾಗ ಮಾಡಿದವರು ಸ್ವಾಮಿ ಯೋಗಾನಂದರು, ಅವರ ನಂತರ ಸ್ವಾಮೀಜಿಯವರು, ತದನಂತರ ನಿರಂಜನ ಮಹಾರಾಜ್ ಮತ್ತು ಅದ್ವೈತಾನಂದರು, ಐದನೆಯವರೇ ಶಶಿ ಮಹಾರಾಜ್. ದಕ್ಷಿಣ ಭಾರತದಲ್ಲಿ ಶಶಿ ಮಹಾರಾಜರು ವಿನಿಯೋಗಿಸಿದ ಅವಿಶ್ರಾಂತ ಸೇವೆಯ ೧೪ ವರ್ಷಗಳು ರಾಮಕೃಷ್ಣ ಸಂಘದ ಇತಿಹಾಸದಲ್ಲಿ ಹೊಸದೊಂದು ಗೌರವೋಜ್ವಲ ಅಧ್ಯಾಯವನ್ನೇ ರಚಿಸಿತ್ತು. ರಾಮಕೃಷ್ಣಾನಂದರ ದೇಹತ್ಯಾಗದ ವಿಷಯವನ್ನು ಕೇಳಿದ ಬ್ರಹ್ಮಾನಂದರು ವಿಷಣ್ಣರಾಗಿ, ''ಒಬ್ಬ ದಿಕ್ಪಾಲಕ ಹೊರಟುಹೋದ; ದಕ್ಷಿಣ ದಿಕ್ಕು ಅಂಧಕಾರದಲ್ಲಿ ಮುಳುಗಿದಂತಿದೆ'' ಎಂದಿದ್ದರು.

ಸ್ವಾಮಿ ಶಾರದಾನಂದರು ತಮ್ಮ ಸೋದರ ಸಂನ್ಯಾಸಿಯ ಮಹಾಸಮಾಧಿಯ ನಂತರ 'ಉದ್ಬೋಧನ' ಪತ್ರಿಕೆಯಲ್ಲಿ ಹೀಗೆಂದು ಬರೆದಿದ್ದರು:

''ಪ್ರಿಯದರ್ಶನರಾದ ರಾಮಕೃಷ್ಣಾನಂದರ ಅನನ್ಯ ಗುರುಭಕ್ತಿ, ಕೈಗೊಂಡ ಕೆಲಸದಲ್ಲಿ ನಿಷ್ಠೆ, ಸೇವಾಪರಾಯಣತೆ, ಜ್ವಲಂತ

---

೨ ಈ ಮಹಾನ್ ಸಂನ್ಯಾಸಿಯ ಬಗ್ಗೆ ಬರೆದಿರುವ ಹೃದಯಸ್ಪರ್ಶಿ ಲೇಖನವೊಂದನ್ನು ಶ್ರೀ ಸುರೇಂದ್ರನಾಥ ಚಕ್ರವರ್ತಿಗಳು ಪ್ರಕಾಶನಕ್ಕೆ ತಂದಿದ್ದಾರೆ (ಉದ್ಬೋಧನ, ಭಾದ್ರಪದ ೧೩೪೯, ಬಂಗಾಳಿ ವರ್ಷ). ಈ ಲೇಖಕರು ಜಗದಾನಂದರ ಅಂತರಂಗ ಸ್ನೇಹಿತರು; ಒಟ್ಟಿಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು. ಸ್ವಾಮಿ ಜಗದಾನಂದರಿಂದ ಅನುವಾದಿಸಲ್ಪಟ್ಟಿರುವ ಶಂಕರಾಚಾರ್ಯರ '**ಉಪದೇಶ-ಸಾಹಸ್ರೀ**' '**ವಾಕ್ಯವೃತ್ತಿ**', '**ಆತ್ಮಜ್ಞಾನೋಪದೇಶ ವಿಧಿ**' ಹಾಗೂ ಬಂಗಾಳಿ ಭಾಷೆಗೆ ಅನುವಾದಿಸಲ್ಪಟ್ಟಿರುವ ಸುರೇಶ್ವರಾಚಾರ್ಯರ '**ನೈಷ್ಕರ್ಮ್ಯಸಿದ್ಧಿ**' ಗ್ರಂಥಗಳು ಓದಲು ಯೋಗ್ಯವಾದವುಗಳು. ಸ್ವಾಮಿ ಶಾರದಾನಂದರಿಂದ ರಚಿಸಲ್ಪಟ್ಟ '**ಶ್ರೀ ರಾಮಕೃಷ್ಣ ಲೀಲಾಪ್ರಸಂಗ**' (Sri Ramakrishna—The Great Master) ಎಂಬ ಗ್ರಂಥವನ್ನು ಇವರು ಇಂಗ್ಲಿಷಿಗೆ ಅನುವಾದಿಸಿರುವುದು ಇವರ ಮತ್ತೊಂದು ಮಹತ್ತಾದ ಕೀರ್ತಿ.

ತ್ಯಾಗ ಹಾಗೂ ದೈವಭಕ್ತಿಯು ಇವರನ್ನು ಒಂದೆಡೆ ಭಕ್ತರ ಆದರ್ಶವನ್ನಾಗಿಸಿದ್ದರೆ, ಮತ್ತೊಂದೆಡೆ ಇವರ ವಿದ್ಯೆ, ಬುದ್ಧಿ, ವಿನಯ, ಶಾಸ್ತ್ರಜ್ಞಾನ, ಸಹಾನುಭೂತಿ ಮತ್ತು ಸಹೃದಯತೆಯು ಇವರನ್ನು ಸಂಸಾರಾನಲ ದಗ್ಧ ಜೀವಿಗಳಿಗೆ ಶಾಂತಿ-ಭರವಸೆಗಳ ಆಶ್ರಯ ದಾತರನ್ನಾಗಿಸಿತ್ತು.''

* * *

ಕೆಲವು ತಿಂಗಳ ನಂತರ ಮತ್ತೊಂದು ದಾರುಣ ಸುದ್ದಿಯನ್ನು 'ಉದ್ಬೋಧನ'ದಲ್ಲಿ ಶಾರದಾನಂದರು ಹೀಗೆ ಮುದ್ರಿಸಬೇಕಾಯಿತು:

''ರಾಮಕೃಷ್ಣನಭದ ಮತ್ತೊಂದು ಉಜ್ವಲ ತಾರೆಯ ಸ್ನಿಗ್ಧೋಜ್ವಲ ಕಿರಣ ಮಾಲೆಯ ಅಮೃತವರ್ಷಣದಿಂದ ಇಂದು ಭಾರತ ಮತ್ತು ಇಡೀ ಧರೆಯೇ ವಂಚಿತವಾಗಿದೆ. ಸ್ವಾಮಿ ವಿವೇಕಾನಂದರ ಮೂಲಕ ಶ್ರೀ ಉಮಾಮಹೇಶ್ವರರ ಪರಮ ಪದದಲ್ಲಿ ನಿವೇದಿಸಲ್ಪಟ್ಟ ಕುಮಾರಿ ನಿವೇದಿತೆಯು ಗುರುವಿನ ಮೂಲಕ ಬಹುಜನ ಹಿತಕ್ಕಾಗಿ ಯಾವೊಂದು ವ್ರತವನ್ನು ಕೈಕೊಂಡಿದ್ದರೋ, ಅದನ್ನು ದಕ್ಷ ರೀತಿಯಲ್ಲಿ ಪೂರ್ಣಗೊಳಿಸಿ, ತನ್ನ ಶರೀರ-ಮನಸ್ಸನ್ನು ಅಗ್ರ ಆಹುತಿಯನ್ನಾಗಿತ್ತು, ಪರಂಧಾಮಗೈದು, ಇನ್ನೂ ಹೆಚ್ಚಿನ ಕೆಲಸ ಮಾಡುವ ಬಲ ಪಡೆದಿದ್ದಾರೆ. ಸ್ವಾಮೀಜಿಯವರು ನಿವೇದಿತೆಗೆ ವ್ರತವನ್ನೀಯುತ್ತ ಆಶೀರ್ವದಿಸಿ ಹೀಗೆಂದಿದ್ದರು, ''ನೀನು ಭಾರತದ ಭಾವೀ ಜನತೆಗೆ ಶಿಕ್ಷಕಿಯಾಗು'' ಎಂದು. ನಿವೇದಿತೆಯೂ ಸಹ ಈ ಆದೇಶವನ್ನು ೧೪ ವರ್ಷಗಳು ಕಾಯೇನ-ವಾಚಾ-ಮನಸಾ ಅಕ್ಷರಶಃ ಪಾಲಿಸಿದ್ದಾರೆ. ಅವರೀಗ ಸ್ಥೂಲ ತನುವನ್ನು ತ್ಯಜಿಸಿ, ದೇವರ ಕೃಪೆಯಿಂದ ಮೃತ ಸಂಜೀವಿನಿಯಾದ ಭಾವ ತನುವಾಗಿ ಪರಿವರ್ತಿತರಾಗಿ ತನ್ನ ಗುರುವಿನೊಡನೆ ಎಲ್ಲ ಭಾರತೀಯರ ಹೃದಯವನ್ನು ಬೆಳಗುತ್ತಿದ್ದಾರೆ. ಸೂಕ್ಷ್ಮ ಪ್ರೇರಣಾಶಕ್ತಿಯನ್ನಾಗಿ ಎಲ್ಲರನ್ನೂ ಕಲ್ಯಾಣದ ಮಾರ್ಗದಲ್ಲಿ ಕೊಂಡೊಯ್ಯುವ ಶಕ್ತಿ ಪಡೆದಿದ್ದಾರೆ. 'ಸೂಕ್ಷ್ಮವೇ ಸ್ಥೂಲದ ಪ್ರೇರಕ, ಮನವೇ ಜಡದ ನಿಯಾಮಕ.' ಆದ್ದರಿಂದ ನಾರೀದೇಹದಲ್ಲಿ ಬೆಳಗುತ್ತಿದ್ದ ನಿವೇದಿತಾ ಎಂಬ ಭಾವರಾಶಿಯು ತನ್ನ ಸ್ಥೂಲತನುವನ್ನು ಬಿಟ್ಟ ಮೇಲೆ ತನ್ನ ಕೆಲಸವನ್ನು ಇನ್ನೂ ವಿಶೇಷ ರೂಪದಲ್ಲಿ ಮಾಡುತ್ತಿದೆಯೋ ಏನೋ?! ಹೇಳಬಲ್ಲವರಾರು?! ಸೂಕ್ಷ್ಮದೃಷ್ಟಿಸಂಪನ್ನನಾದ ಸಾಧಕನು ಜನ್ಮ ಮೃತ್ಯುಗಳಾಚೆಗೂ ದೃಷ್ಟಿ ಬೀರಿ ಈ ನಿಜವನ್ನು ಹೃದ್ಗತಮಾಡಿಕೊಳ್ಳಬಲ್ಲ ಮತ್ತು ಅತ್ಯಂತ ವಿಷಾದದ ಸಮಯದಲ್ಲೂ ಶಾಂತಿ ಸಮಾಧಾನದಿಂದಿರಬಲ್ಲ. ಆದರೆ ಸ್ಥೂಲ ದೃಷ್ಟಿಯನ್ನುಳ್ಳ ನಾವು ಸ್ವಾರ್ಥಗಂಧವಿಹೀನಳಾದ ನಿವೇದಿತೆಯನ್ನು ಇನ್ನು ಮುಂದೆ ಕಾಣಲಾಗದೆ ಇರುವುದರಿಂದ ವ್ಯಥಿತರಾಗಿ ಓದುಗರಿಗೆ ಹೀಗೆಂದು ತಿಳಿಸುತ್ತಿದ್ದೇವೆ.

''ಭಾರತದ ಚಿರ ಕಲ್ಯಾಣಾಕಾಂಕ್ಷಿಣಿಯೂ ಪರಮ ಆತ್ಮೀಯಳೂ ಆದ ಬ್ರಹ್ಮಚಾರಿಣಿ ನಿವೇದಿತೆಯು ಭೂಸ್ವರ್ಗವಾದ ಹಿಮಾಲಯದ ಡಾರ್ಜಿಲಿಂಗಿನಲ್ಲಿ ಸುಮಾರು ಎರಡು ವಾರಕ್ಕೂ ಹೆಚ್ಚಾಗಿ ಆಮಶಂಕೆ ರೋಗದಿಂದ ನರಳುತ್ತಿದ್ದು, ಕಳೆದ ಶುಕ್ರವಾರ, ೧೩ನೇ ಅಕ್ಟೋಬರ್ (೧೯೧೧) ರಂದು ತಮ್ಮ ನಶ್ವರ ಸ್ಥೂಲ ಶರೀರವನ್ನು ತ್ಯಜಿಸಿದ್ದಾರೆ. ಹರಿಃ ಓಂ ಶಾಂತಿಃ ಶಾಂತಿಃ ಶಾಂತಿಃ''

ಮಾಯಾವತಿಯಲ್ಲಿ ಮದರ್ ಸೇವಿಯರ್ (೧೯೧೧ರ ಮಾರ್ಚ್‌ನಲ್ಲಿ ಇಂಗ್ಲೆಂಡಿನಿಂದ ಹಿಂತಿರುಗಿದ್ದರು), ವಿರಜಾನಂದರು ಮತ್ತಿತರ ಸಂನ್ಯಾಸಿ ಬ್ರಹ್ಮಚಾರಿಗಳು ಸೋದರಿ ನಿವೇದಿತೆಯು ಮಾಯಾವತಿಗೆ ನೀಡಿದ ಕೊನೆಯ ಭೇಟಿಯನ್ನು ನೆನೆದರು. ನಾಲ್ಕು ತಿಂಗಳ ಹಿಂದಷ್ಟೇ ೧೯ರಂದು ಡಾ. ಜಗದೀಶ್ ಚಂದ್ರ ಬೋಸ್, ಅವರ ಪತ್ನಿ ಅಬಲಾ ಬೋಸ್, ಅವರ ಸೋದರನ ಮಗನಾದ ಅರವಿಂದ ಬಸು (ಖೋಕಾ)ಗಳೊಂದಿಗೆ ನಿವೇದಿತೆಯು ಮಾಯಾವತಿಗೆ ಬಂದು ಒಂದು ತಿಂಗಳ ಕಾಲ ತಂಗಿದ್ದರು. ಸುತ್ತಮುತ್ತಲ ಸ್ಥಳಗಳಲ್ಲಿ ತಿರುಗಾಡಿ ಬರುತ್ತಿದ್ದರು. ಸ್ವಾರಸ್ಯಕರವಾದ ಅನೇಕ ಘಟನೆಗಳನ್ನು ಹೇಳಿ ತಮ್ಮ ಮಾತುಕತೆಗಳಿಂದ ಎಲ್ಲರನ್ನು ರಂಜಿಸಿದ್ದರು. ಒಂದು ದಿನ ಎಲ್ಲರೊಂದಿಗೆ ಬ್ಯಾಡ್‌ಮಿಂಟನ್ ಸಹ ಆಡಿದ್ದರು. ಜೂನ್ ೧೮ರಂದು, ಭಾನುವಾರ 'ಸಂಘದ ಮೂಲಕ ವಿದ್ಯಾಪ್ರಚಾರ' ಎಂಬ ವಿಷಯದ ಬಗ್ಗೆ ಘನ ವಿಚಾರಗಳನ್ನು ಹೊರಹೊಮ್ಮಿಸುವಂತಹ ಚರ್ಚೆಯನ್ನು ಆಶ್ರಮವಾಸಿಗಳೊಂದಿಗೆ ನಡೆಸಿದ್ದರು. 'ಜ್ಞಾನ ಚರ್ಚೆಯ ಕ್ಷೇತ್ರದಲ್ಲಿ ಧಾರ್ಮಿಕ ಮತ್ತು ಲೌಕಿಕ ಎಂಬ ಭೇದವನ್ನು ಉಳಿಸಿಕೊಳ್ಳುವುದು ವ್ಯರ್ಥ' ಎಂದಿದ್ದರು.[೩]

೧೯೧೧ರಲ್ಲಿ ರಾಮಕೃಷ್ಣ ಸಂಘದ ಸಾಧುಗಳಿಗೂ ಮತ್ತು ಭಕ್ತರಿಗೂ ಮತ್ತೊಂದು ದುಃಖದ ಸಂಗತಿ ಕಾದಿತ್ತು. ಸೋದರಿ ನಿವೇದಿತೆಯ ದೇಹತ್ಯಾಗದ ಮಾರನೇ ದಿನವೇ, ಅಂದರೆ ಅಕ್ಟೋಬರ್ ೧೪ರಂದು ರಾಮಕೃಷ್ಣರ ಗೃಹಸ್ಥ ಭಕ್ತರಾದ ದೇವೇಂದ್ರನಾಥ ಮಜುಮ್ದಾರ್‌ರವರು ಪ್ರಜ್ಞಾಪೂರ್ವಕವಾಗಿ ಇಷ್ಟ ಮಂತ್ರವನ್ನು ಜಪಿಸುತ್ತ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದ್ದರು. ಇವರು ಕೊಲ್ಕತ್ತೆಯ ಎಂಟಾಲಿ ಎಂಬಲ್ಲಿರುವ ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರದ ವ್ಯವಸ್ಥಾಪಕರಾಗಿದ್ದರು. ಇವರನ್ನು ಕುರಿತು ಬರೆಯುತ್ತ ಶರತ್ ಮಹಾರಾಜರು, ''ಭಾವರಸದಲ್ಲಿ ತೇಲುವ ಅವರ ಸೌಮ್ಯ ಮೂರ್ತಿಯನ್ನು ಇನ್ನು ನೋಡಲಾಗುವುದಿಲ್ಲವೆಂದು ನೆನೆದು ಅತ್ಯಂತ ವ್ಯಥಿತರಾಗಿದ್ದೇವೆ'' ಎಂದಿದ್ದಾರೆ. ದೇವೇನ್ ಬಾಬುಗಳು ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗುರುವಂದನೆಯಾದ 'ಭವಸಾಗರ ತಾರಣ ಕಾರಣ ಹೇ'

---

೩. ಭಗಿನಿ ನಿವೇದಿತೆಯು ಈ ಹಿಂದೆ ಮೂರು ಬಾರಿ ಮಾಯಾವತಿಗೆ ಹೋಗಿದ್ದರು. ಮೊದಲ ಬಾರಿ ೧೯೦೨ರ ಮೇ ತಿಂಗಳಲ್ಲಿ ಜಪಾನಿ ಕಲಾವಿದನಾದ ಓಕಾಕುರಾರವರನ್ನು ಕರೆದುಕೊಂಡು ಹೋಗಿದ್ದರು. ಎರಡನೇ ಬಾರಿ ಡಾ. ಜಗದೀಶ್ ಚಂದ್ರ ಬೋಸ್, ಶ್ರೀಮತಿ ಅಬಲಾ ಬೋಸ್ ಮತ್ತವರ ಆತ್ಮೀಯರೊಬ್ಬರು ಹಾಗೂ ಸಿಸ್ಟರ್ ಕ್ರಿಸ್ಟೀನ್ ರವರೊಂದಿಗೆ. ೧೯೦೭ರಲ್ಲಿ ಬೋಸ್ ದಂಪತಿಗಳೊಂದಿಗೆ ಮೂರನೆಯ ಬಾರಿ.

ಮತ್ತು ರಾಮಕೃಷ್ಣರ ಬಗ್ಗೆ ರಚಿಸಿದ 'ಭವಭಯಭಂಜನ ಪುರುಷ ನಿರಂಜನ' ಎಂಬ ಹಾಡಿನಿಂದಾಗಿ ಅವರು ಅಮರರಾಗಿದ್ದಾರೆ.

ಸ್ವಾಮೀಜಿಯವರ ಕೃತಿಸಂಗ್ರಹದ ಐದನೇ ಭಾಗ ಸಂಪೂರ್ಣವಾಗುತ್ತಿದ್ದಂತೆ, ಅವರ ಸವಿಸ್ತಾರವಾದ ಜೀವನ ಚರಿತ್ರೆಯನ್ನು ಮುದ್ರಿಸುವ ಹೊಸ ಆಲೋಚನೆಯು ವಿರಜಾನಂದರಿಗೆ ಬಂದಿತು. ಅದನ್ನು ಮದರ್ ಸೇವಿಯರ್‌ಗೆ ತಿಳಿಸಿದಾಗ ಅವರೂ ಸಹ ಉತ್ಸಾಹ ತೋರಿದರು. ತಕ್ಷಣವೇ ವಿರಜಾನಂದರು ನಾನಾ ಮೂಲಗಳಿಂದ ಅಗತ್ಯವಿರುವ ವಿಷಯಗಳನ್ನು ಸಂಗ್ರಹಿಸತೊಡಗಿದರು. ಅದೃಷ್ಟವಶಾತ್ ಮಾಯಾವತಿಯಲ್ಲಾಗ ಫ್ರಾನ್ಸಿಸ್ ಜಾನ್ ಅಲೆಕ್ಸಾಂಡರ್ ಎಂಬ ವಿಖ್ಯಾತ ಅಮೇರಿಕನ್ ಲೇಖಕರೊಬ್ಬರು ತಂಗಿದ್ದರು. ಪೌರಾತ್ಯ ಧರ್ಮ ಮತ್ತು ಶಾಸ್ತ್ರಗಳ ಬಗ್ಗೆ, ವಿಶೇಷವಾಗಿ ಸ್ವಾಮಿ ವಿವೇಕಾನಂದರ ಬಗ್ಗೆ ಅವರು ತುಂಬ ಗೌರವ ತಾಳಿದ್ದರು. ಅವರಲ್ಲೊಂದು ಅಪೂರ್ವ ಶಕ್ತಿಯಿತ್ತು; ಟೈಪ್‌ರೈಟರ್ ಮುಂದೆ ಕುಳಿತು ಒಂದು ಗಂಟೆಯೊಳಗಾಗಿ ೬-೭ ಪುಟಗಳ ಸಾಹಿತ್ಯ ರಚಿಸಿ ಟೈಪ್ ಮಾಡುತ್ತಿದ್ದರು. ಎಲ್ಲವನ್ನೂ ಹೃದಯದ ಪ್ರೇರಣೆಯಿಂದಲೇ ಬರೆಯುತ್ತಿದ್ದರು. ವಿರಜಾನಂದರು ಈತನಿಗೆ ಸ್ವಾಮೀಜಿಯವರ ಜೀವನ ಚರಿತ್ರೆ ಬರೆಯುವ ಜವಾಬ್ದಾರಿ ನೀಡಲು ಸಂಕಲ್ಪಿಸಿದರು. ಅಲೆಕ್ಸಾಂಡರ್ (ಫ್ರ್ಯಾಂಕ್) ಸಹ ಈ ಕೆಲಸವನ್ನು ತುಂಬ ಸಂತೋಷದಿಂದ ಒಪ್ಪಿಕೊಂಡರು. ಸ್ವಾಮಿ ವಿರಜಾನಂದರು ವಿಷಯವನ್ನು ಸಂಗ್ರಹಿಸಿ ಒದಗಿಸುವುದು, ಫ್ರ್ಯಾಂಕ್ ಚರಿತ್ರೆಯನ್ನು ಬರೆಯುವುದು, ನಂತರ ವಿರಜಾನಂದರು ಮದರ್ ಸೇವಿಯರ್‌ರವರ ಸಹಾಯದಿಂದ ಅದನ್ನು ತಿದ್ದುವುದು — ಹೀಗೆಂದು ನಿರ್ಧಾರಿತವಾಯಿತು.

ಫ್ರ್ಯಾಂಕ್ ಬರೆಯುವ ಕೆಲಸವನ್ನು ಬೇಗನೆ ಪ್ರಾರಂಭಿಸಿದರು. ಅವರ ಭಾಷೆ ಸ್ಪಷ್ಟವಾಗಿಯೂ, ಭಾವಮಯವಾಗಿಯೂ ಇದ್ದಿತಾದರೂ ಅನಗತ್ಯವಾದ ಪುನರಾವೃತ್ತಿ ಇದ್ದದ್ದನ್ನು ಕಂಡ ವಿರಜಾನಂದರು, ಓದುಗರಿಗೆ ಇದು ಬೇಸರ ತರುವುದೆಂಬುದನ್ನು ಮನಗಂಡರು. ಅಲ್ಲದೆ ಫ್ರ್ಯಾಂಕ್ ಸಣ್ಣ-ಪುಟ್ಟ ಘಟನೆಗಳನ್ನು ಎಷ್ಟು ವಿಸ್ತಾರವಾಗಿ ಬರೆದಿದ್ದರೆಂದರೆ ಪುಸ್ತಕವು ಅದರಿಂದಾಗಿ ತುಂಬ ದೊಡ್ಡದಾಗುತ್ತಿತ್ತು. ಹೀಗಾಗಿ ಸಂಗ್ರಹಿಸಿದ ಅನೇಕ ಒಳ್ಳೆಯ ವಿಷಯಗಳನ್ನು ಕೈಬಿಡಬೇಕಾಗುತ್ತಿತ್ತು. ಇದಲ್ಲದೆ ಭಾರತೀಯ ಧರ್ಮ-ಸಂಸ್ಕೃತಿಯ ಬಗ್ಗೆ ಫ್ರ್ಯಾಂಕ್‌ಗೆ ಆಳವಾದ ಜ್ಞಾನವಿರಲಿಲ್ಲ. ಹೀಗಾಗಿ ಫ್ರ್ಯಾಂಕ್‌ನ ಸಾಹಿತ್ಯವನ್ನು ತಿದ್ದಲು ಹೋಗಿ ವಿರಜಾನಂದರು ತುಂಬ ಕಷ್ಟಕ್ಕೆ ಸಿಲುಕಿದರು. ಅನವಶ್ಯಕವಾಗಿ ಬೆಳೆಸಿಕೊಂಡು ಹೋಗಿದ್ದೆಡೆ ಅದನ್ನು ತೆಗೆದುಹಾಕಬೇಕಿತ್ತು. ಬಿಟ್ಟುಹೋದ ಕೆಲವು ಘಟನೆಗಳನ್ನು ಅಲ್ಲಲ್ಲಿ ಸೇರಿಸಬೇಕಿತ್ತು. ಭಾರತೀಯ ಮನೋಭಾವಕ್ಕೆ ಸರಿಹೊಂದದ ಕೆಲವು ಭಾಗಗಳನ್ನು ಆಮೂಲಾಗ್ರವಾಗಿ ಬದಲಿಸಬೇಕಾಗುತ್ತಿತ್ತು. ತನ್ನ ಬರಹವು ಹೀಗೆ ತೀವ್ರ ಸಂಸ್ಕರಣಕ್ಕೆ ಒಳಗಾಗುತ್ತಿದ್ದುದನ್ನು ಕಂಡ ಫ್ರ್ಯಾಂಕ್ ಸಹಜವಾಗಿಯೇ ಕೋಪಗೊಳ್ಳುತ್ತಿದ್ದ. ಹೀಗಾದಾಗ ಮದರ್ ಸೇವಿಯರ್ ಮಧ್ಯಸ್ಥಿಕೆ ವಹಿಸಿ ಅವರನ್ನು ಸಮಾಧಾನಗೊಳಿಸುತ್ತಿದ್ದರು. ವಿರಜಾನಂದರಿಗೆ, ''ನೀನು ಅಷ್ಟೊಂದಾಗಿ ಬದಲಾಯಿಸದೆ, ಅವನು ಕೋಪಿಸಿಕೊಳ್ಳದಂತೆ ಮಾಡಲು ಸ್ವಲ್ಪವೇ ತಿದ್ದು'' ಎಂದು ಬುದ್ಧಿವಾದ ಹೇಳುತ್ತಿದ್ದರು. ವಿರಜಾನಂದರು ಖೇದಗೊಂಡು, ''ನಾನು ನನ್ನ ಮನಸ್ಸಿಗೆ ಬಂದಂತೆ ಮಾಡುತ್ತಿಲ್ಲ. ಎಲ್ಲಿ ಅತ್ಯಂತ ಅಗತ್ಯವಿರುವುದೋ ಅಲ್ಲಿ ಮಾತ್ರ ತಿದ್ದುತ್ತಿರುವೆ'' ಎನ್ನುತ್ತಿದ್ದರು.

ಫ್ರ್ಯಾಂಕ್‌ನೊಬ್ಬ ದಿಲ್ದಾರ್ ಮನುಷ್ಯ; ತನ್ನ ಖರ್ಚು-ವೆಚ್ಚಗಳ ಲೆಕ್ಕವೇ ಆತನಿಗಿರುತ್ತಿರಲಿಲ್ಲ. ಇದ್ದದ್ದನ್ನೇ ಕೈಯೆತ್ತಿ ದಾನ ಮಾಡುವ ಸ್ವಭಾವದವನು. ಮದರ್ ಸೇವಿಯರ್ ಆತನನ್ನು ಗೆಲುವಾಗಿರಿಸಲು ಆತನ ಕೈಗೆ ಆಗಾಗ ಹಣವನ್ನು ತುರುಕುತ್ತಿದ್ದರು. ಅದನ್ನು ಖರ್ಚು ಮಾಡಲು ಅವನಿಗೆ ೨-೩ ದಿನವೂ ಹಿಡಿಯುತ್ತಿರಲಿಲ್ಲ.

ಪುಸ್ತಕದ ತಿದ್ದುಪಡಿಯ ಬಗ್ಗೆ ಒಮ್ಮೆ ಫ್ರ್ಯಾಂಕ್‌ಗೂ ವಿರಜಾನಂದರಿಗೂ ಸ್ವಲ್ಪ ಹೆಚ್ಚಾಗಿಯೇ ಭಿನ್ನಾಭಿಪ್ರಾಯ ಉಂಟಾಗಿ ಫ್ರ್ಯಾಂಕ್, ''ಇನ್ನು ನಾನು ಇಲ್ಲಿರುವುದಿಲ್ಲ, ಕೆಲಸವನ್ನು ಮುಂದುವರಿಸುವುದಿಲ್ಲ'' ಎಂದುಬಿಟ್ಟ. ಮದರ್ ಸೇವಿಯರ್ ಬಹಳ ಸಾಂತ್ವನ ನೀಡಿ ಅವನನ್ನು ಶಾಂತಗೊಳಿಸಿದರು. ಕೊನೆಗೆ ಅವನು, ''ನನ್ನ ಮನಸ್ಸು ತುಂಬ ಪ್ರಕ್ಷುಬ್ಧಗೊಂಡಿದೆ, ಸ್ವಲ್ಪ ದಿನ ಆಲ್ಮೋರದಲ್ಲಿ ತಿರುಗಾಡಿ ಬರುವೆ'' ಎಂದು ತನ್ನ ನಿರ್ಧಾರವನ್ನು ತಿಳಿಸಿದ. ಮದರ್ ಸೇವಿಯರ್ ಅದಕ್ಕೊಪ್ಪಿ ೨೦೦-೩೦೦ ರೂಗಳನ್ನು ಸಹ ಅವನಿಗಿತ್ತರು. ಅವನು ಹೋದ ನಂತರ ವಿರಜಾನಂದರು ಮದರ್‌ಗೆ, ''ನಾನು ಪೂರ್ಣ ವಿವೇಚನೆಯಿಂದಲೇ ಪುಸ್ತಕವನ್ನು ತಿದ್ದುತ್ತಿರುವೆ. ಪುಸ್ತಕವು ಪ್ರಕಟವಾಗುವುದು ಅದ್ವೈತ ಆಶ್ರಮದಿಂದ; ಆದ್ದರಿಂದ ಇದರ ಸಂಪೂರ್ಣ ಜವಾಬ್ದಾರಿ ನನ್ನದೆ. ಫ್ರ್ಯಾಂಕ್ ಹೊರಟುಹೋಗಲಿಚ್ಛಿಸಿದರೆ ಹಾಗೇ ಮಾಡಲಿ, ಭಯವೇನು? ಪುಸ್ತಕವನ್ನು ನಾನೇ ಬರೆಯುವೆ. ಅದಕ್ಕೆ ಬೇಕಾದ ವಿಷಯಗಳಂತೂ ಸಂಗ್ರಹವಾಗಿಯೇ ಇದೆ'' ಎಂದರು. ಆದರೆ ಕೆಲವು ದಿನಗಳಲ್ಲೇ ಆಲ್ಮೋರದಿಂದ ಫ್ರ್ಯಾಂಕ್ ಹಿಂತಿರುಗಿ ಬಂದು ತನ್ನ ಬರಹದ ಕೆಲಸವನ್ನು ಪುನರಾರಂಭಿಸಿದನು. ಪುಸ್ತಕವನ್ನು ಚೆನ್ನಾಗಿ ಮುದ್ರಿಸಬೇಕೆಂಬ ಉದ್ದೇಶದಿಂದ ವಿರಜಾನಂದರು ಅದನ್ನು ಮಾಯಾವತಿಯಲ್ಲಿ ಮುದ್ರಿಸದೆ, ಕೊಲ್ಕತ್ತೆಯ ಒಳ್ಳೆಯ ಮುದ್ರಣಾಲಯದಲ್ಲಿ ಮುದ್ರಿಸುವ ಏರ್ಪಾಟು ಮಾಡಿದ್ದರು. ಪುಸ್ತಕದ ಮುದ್ರಣಕ್ಕೆ ಅವರು ತುಂಬ ಶ್ರಮಿಸಬೇಕಾಯಿತಾದರೂ ಮದರ್ ಸೇವಿಯರ್‌ರವರ ಸಹಾಯದಿಂದ ಯಶಸ್ವಿಯಾಗಿ ಮುಗಿಸಿದರು. ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಕನಿಷ್ಠ ೫ ಖಂಡಗಳಲ್ಲಿ ಪ್ರಕಟಿಸಬೇಕಾಗುವುದು ಎಂಬುದನ್ನು ವಿರಜಾನಂದರು ಮನಗಂಡರು. ೩ ಖಂಡಗಳನ್ನು ಫ್ರ್ಯಾಂಕ್ ಬರೆದಿದ್ದನು, ನಾಲ್ಕನೆಯದನ್ನು ವಿರಜಾನಂದರೇ ಮುಖ್ಯವಾಗಿ ಬರೆದರು. ಮೊದಲ ಖಂಡವನ್ನು ತಿದ್ದುವಲ್ಲಿ ಅವರಿಗೆ ಸ್ವಾತಂತ್ರ್ಯವಿರಲಿಲ್ಲ; ಬಾಕಿ ಖಂಡಗಳನ್ನು ತೊಂದರೆಯಿಲ್ಲದೆ ಅಗತ್ಯಕನುಗುಣವಾಗಿ ತಿದ್ದಿದರು.

*(ಮುಂದುವರಿಯುವುದು)*